# ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

## ದೂರ ಶಿಕ್ಷಣ ಕೇಂದ್ರ

ಮಂಗಳಗಂಗೋತ್ರಿ, ಮಂಗಳೂರು – 574 199

ನಿರ್ದೇಶಕರ ಕಛೇರಿ
ದೂರ ಶಿಕ್ಷಣ ಕೇಂದ್ರ

ಕಛೇರಿ: 0824–2287281


ಸಂಖ್ಯೆ: ಮಂವಿ/ದೂಶಿಕೇ/ಬಿ.ಎಡ್./2019–20

ದಿನಾಂಕ: 25.09.2019

## ದೂರ ಶಿಕ್ಷಣ ಬಿ.ಎಡ್. ಸಂಪರ್ಕ ಕಾರ್ಯಕ್ರಮ - 2
## (ದಿನಾಂಕ: 07.10.2019 ರಿಂದ 28.10.2019)

### ಪ್ರೀತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯರೇ, ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಬಿ.ಎಡ್. ಕೋರ್ಸಿನ ಎರಡನೇ ಸಂಪರ್ಕ ಕಾರ್ಯಕ್ರಮ ಕುರಿತ ಸೂಚನೆಗಳು

1. ಸಂಪರ್ಕ ಕಾರ್ಯಕ್ರಮದ ಒಟ್ಟು ದಿನಗಳಲ್ಲಿ (ಮೊದಲ ಮತ್ತು ಎರಡನೆಯ ಸಂಪರ್ಕ ಕಾರ್ಯಕ್ರಮ ಸೇರಿದಂತೆ) ಶೇ.80 ರಷ್ಟು ಹಾಜರಾತಿ ಕಡ್ಡಾಯ.

2. ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಬಿ.ಎಡ್. ಎರಡನೇ ಸಂಪರ್ಕ ಕಾರ್ಯಕ್ರಮವು ದಿನಾಂಕ: 07.10.2019 ರಿಂದ 28.10.2019ರವರೆಗೆ ನಡೆಯಲಿದೆ.

3. ನೀವು 07.10.2019ರಂದು ಎರಡನೇ ಸಂಪರ್ಕ ಕಾರ್ಯಕ್ರಮಕ್ಕೆ ಮೊದಲನೇ ಸಂಪರ್ಕ ಕಾರ್ಯಕ್ರಮದಲ್ಲಿ(ಏಪ್ರಿಲ್/ಮೇ–2019) ನಿಯೋಜಿಸಲಾಗಿದ್ದ ಅಧ್ಯಯನ ಕೇಂದ್ರದಲ್ಲಿ ಹಾಜರಾಗತಕ್ಕದ್ದು.

4. ಅಮೃತ ಶಿಕ್ಷಣ ವಿದ್ಯಾಲಯ, ಮಂಗಳೂರು ಇಲ್ಲಿ ಎರಡನೇ ಸಂಪರ್ಕ ಕಾರ್ಯಕ್ರಮ ಆಯೋಜಿಸಲಾಗುವುದಿಲ್ಲ. ಮೊದಲನೇ ಸಂಪರ್ಕ ಕಾರ್ಯಕ್ರಮದಲ್ಲಿ ಅಮೃತ ಶಿಕ್ಷಣ ವಿದ್ಯಾಲಯ, ಮಂಗಳೂರು ಇಲ್ಲಿ ಭಾಗವಹಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆ, ಮಂಗಳೂರು ಇಲ್ಲಿ ಮೊದಲನೆಯ ದಿನ ಹಾಜರಾಗುವುದು. ಮುಂದಿನ ನಿರ್ದೇಶನಗಳನ್ನು ಅಲ್ಲಿ ನೀಡಲಾಗುವುದು.

5. ನೀವು ಬರುವಾಗ ನಿಮ್ಮ ಗುರುತು ಚೀಟಿ ಮತ್ತು ಈ ಪತ್ರವನ್ನು ಜೊತೆಯಲ್ಲಿ ತರುವುದು.

6. ಸಂಪರ್ಕ ಕಾರ್ಯಕ್ರಮದ ಅವಧಿಯಲ್ಲಿ ಎರಡನೇ ವರ್ಷದ 'ಇಂಟರ್ನ್‌ಶಿಪ್' ಕಾರ್ಯಕ್ರಮಕ್ಕೆ ನಿಮ್ಮನ್ನು ಸಿದ್ಧಗೊಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಅಗತ್ಯವಾದ ಎಲ್ಲ ಕಲಿಕಾ ಅನುಭವಗಳನ್ನು ಈ ಅವಧಿಯಲ್ಲಿ ನೀಡಲಾಗುವುದು.

7. ಸಿದ್ಧತೆಯ ಈ ಸಮಯದಲ್ಲಿ ನಿಮಗೆ ನಿಮ್ಮ ಬೋಧನಾ ಪದ್ಧತಿ ವಿಷಯಗಳಿಗೆ ಸಂಬಂಧಿಸಿದ (Methodology) 8, 9 ಮತ್ತು 10ನೇ ತರಗತಿಯ ಪಠ್ಯ ಪುಸ್ತಕಗಳ ಅಗತ್ಯವಿರುತ್ತದೆ. ಹಾಗಾಗಿ ಈ ತರಗತಿಗಳ ಪಠ್ಯ ಪುಸ್ತಕಗಳನ್ನು ತಪ್ಪದೇ ತರುವುದು.

8. ಎರಡನೇ ಸಂಪರ್ಕ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ವಿವರಗಳನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ **www.mangaloreuniversity.ac.in** ದಿನಾಂಕ 03.10.2019 ರಂದು ಅಪ್‌ಲೋಡ್ ಮಾಡಲಾಗುವುದು. ಅದರ ಒಂದು ಪ್ರತಿಯನ್ನು ನಿಮ್ಮೊಂದಿಗೆ ತರುವುದು.

9. ಈ ಅವಧಿಯಲ್ಲಿ ನೀವು ಆಯ್ಕೆ ಮಾಡಿಕೊಂಡಿರುವ ಪ್ರತಿ ಬೋಧನಾ ಪದ್ಧತಿ ವಿಷಯಗಳಲ್ಲಿ ಎರಡು ಪಾಠಗಳನ್ನು ಅಣಕು ಮಾದರಿಯಲ್ಲಿ (in Simulation) ಬೋಧಿಸಬೇಕು. ಈ ಬೋಧನೆಗೆ ಆಂತರಿಕ ಮೌಲ್ಯಮಾಪನ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ನಿಮ್ಮ ಆಯ್ಕೆಯ ಕೆಲವು ಪಾಠ ವಿಷಯಗಳನ್ನು ಮತ್ತು ಸಂಬಂಧಿತ ಸಂಪನ್ಮೂಲಗಳನ್ನು ಸಿದ್ಧಪಡಿಸಿಕೊಂಡು ಬರುವುದು ಅಪೇಕ್ಷಣೀಯ. ಬೋಧನೆಗೆ ಅಗತ್ಯವಾದ ಎಲ್ಲ ರೀತಿಯ ಕಲಿಕಾ ಅನುಭವಗಳಿಗೆ ಮಾರ್ಗದರ್ಶನ ನೀಡಲಾಗುವುದು.

ನಿರ್ದೇಶಕರು
CENTRE FOR DISTANCE EDUCATION